ಶ್ರೀ ಜಿ. ನಾರಾಯಣಗೌಡರು.—ಈ ಬೆಂಕಿ ಅನಾಹುತಕ್ಕೊಳಗಾದವರಿಗೆ ಕೂಡಲೆ ಸ್ಥಳೀಯ ಅಧಿಕಾರಿಗಳು ಅನುಕೂಲ ಕಲ್ಪಿಸಿಕೊಡತಕ್ಕದ್ದು ಅವರ ಕರ್ತವ್ಯ ವಲ್ಲವೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಮನೆಗಳನ್ನು ಸುಟ್ಟುಕೊಂಡವರಿಗೆ ತಾವು ಏನೇನು ಪರಿಹಾರಗಳನ್ನು ನೀಡುತ್ತೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು. ಮನೆ ಕಟ್ಟಿಕೊಳ್ಳಲು ಮರಮುಟ್ಟುಗಳನ್ನೂ ಮತ್ತು ಅಷ್ಟೇ ಅಲ್ಲದೆ ಅನೇಕ ಸಂದರ್ಭಗಳಲ್ಲಿ ದ್ರವ್ಯ ಸಹಾಯವನ್ನೂ ಕೂಡ ಕೊಡಲಾಗಿದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಈ ಸಹಾಯಗಳನ್ನು ತಾವು ಎಷ್ಟು ದಿನಗಳಲ್ಲಿ ಒದಗಿಸಿಕೊಡುತ್ತೀರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆದಷ್ಟು ಬೇಗ.

ಶ್ರೀ ಕಡಿದಾಳ್ ಮಂಜಪ್ಪನವರು.—ಅಂದರೆ ಎಷ್ಟು ಬೇಗ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸುಮಾರು ಒಂದು ವಾರದೊಳಗಾಗಿ ಒದಗಿಸುತ್ತಾರೆ. ಆದರೆ ಸ್ಥಳೀಯ ವಿಚಾರಣೆ ಎಷ್ಟು ಬೇಗ ಮುಗಿಯುತ್ತದೋ. ಆ ದಾಮಾಷಾದಲ್ಲಿ ಜನರಿಗೆ ಸಹಾಯಗಳನ್ನು ನೀಡುತ್ತಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಅವರಿಗೆ ಮನೆ ಕಟ್ಟಿಕೊಳ್ಳಲು ಮರಮುಟ್ಟುಗಳನ್ನು ಕೊಡಲಾಗುತ್ತದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೊಡುತ್ತಾರೆಂದು ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ಬೆಂಕಿ ಅನಾಹುತದ ಬಗ್ಗೆ ಸಹಾಯ ನೀಡಲು ಪ್ರತಿಯೊಂದು ತಾಲ್ಲೂಕಿಗೂ ಇಷ್ಟಿಷ್ಟೆಂದು ಹೇಳಿ ಏನಾದರೂ ಮೊಬಲಗನ್ನು ತೆಗೆದಿಟ್ಟಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಗ ಈ ಬಾಬತ್ತಿಗಾಗಿ ಬಜೆಟ್ಟಿನಲ್ಲಿ 'ಫ್ಯಾಮಿಲಿ ರಿಲೀಫ್ ಫಂಡಿನಿಂದ' ಒದಗಿಸಲಾಗುತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಇದರ ಕನಿಷ್ಟ ಪರಿಮಿತಿಯೇನು ಸ್ವಾಮಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಗಲೆ ಶ್ರೀಮಾನ್ ವೀರಣ್ಣಗೌಡರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದ್ದೇನೆ.

ಶ್ರೀ ಎಂ. ಎರ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಈ ಬಗ್ಗೆ ಪರಿಹಾರ ಕೊಡಲು ಎಷ್ಟು ದಿವಸಗಳೆಂದು ನಿರ್ಧರ ಮಾಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಗಲೇ ಉತ್ತರ ಕೊಡಲಾಗಿದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ಬಗ್ಗೆ ಪರಿಹಾರ ದೊರೆಯದ ಹಳ್ಳಿಯ ಕೇಸುಗಳೇನಾದರೂ ಉಂಟೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಒಂದು ವರ್ಷದ ಅವಧಿಯಲ್ಲಿ ಎಷ್ಟು ಕಡೆ ಬೆಂಕಿ ಬಿದ್ದಿರುವ ನಿದರ್ಶನಗಳು ಲೆಕ್ಕಕ್ಕೆ ಬಂದಿವೆ ? ಮತ್ತು ಆ ಬಗ್ಗೆ ತಾವೆಷ್ಟು ಸಹಾಯ ನೀಡಿದ್ದೀರಿ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು 80 ನಿದರ್ಶನಗಳು ಲೆಕ್ಕಕ್ಕೆ ಬಂದಿದೆ. 37½ ಸಾವಿರ cash grant ಕೊಡಲಾಗಿದೆ.

Mr. SPEAKER.—Question time over.

UNSTARRED QUESTIONS

(to which answers were laid on the table.)

(A) Starred Questions treated as unstarred.

Estimates for Water Supply to Malavalli Taluk.

*Q.—**140.** Sri M. C. VENKATESHAN (Mandya District—Depressed Class).—

Will the Government be pleased to state :—

(a) whether the water supply estimate of Malavalli Town is approved by them ;

(b) if not, the stage at which the record is pending ?

A.—**The Hon'ble Sri R. CHENNIGARAMIAH** (Minister for Local Self-Government).—

(a) No.

(b) The estimate for Rs. 6,61,800 has been referred to the Chief Engineer for scrutiny.

Estimates for Tarring the main roads of Malavalli Town.

*Q.—**141.** Sri M. C. VENKATESHAN (Mandya District—Depressed Class).—

Will the Government be pleased to state :—

(a) whether any representation is received by the Deputy Commissioner, Mandya, or by the Government regarding tarring the main roads of Malavalli Town ;

(b) if so, the stage at which the record is pending ?

A.—**The Hon'ble Sri R. CHENNIGARAMIAH** (Minister for Local Self-Government).—

(a) Yes.

(b) An estimate is under preparation by the Public Works Department.